## ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

### ಟೆಂಡರ ಫಾರ್ಮ

ಸಂ.KU/Hort./Sale/22-23/120 ದಿನಾಂಕ: 21-10-2022

ಕ.ವಿ.ವಿ ಆವರಣದಲ್ಲಿ ಮತ್ತು ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿ ಒಣಗಿ ನಿಂತ ಮತ್ತು ಒಣಗಿ ಬಿದ್ದ ಗಿಡಗಳನ್ನು ಟೆಂಡರ/ಬಹಿರಂಗ ಹರಾಜನ್ನು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ. ವಿವರಣೆ ಈ ಕೆಳಗಿನಂತಿದೆ.

| ಲಾಟ ಸಂಖೆ | ಮಾಲಿನ ವಿವರಣೆ | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ | ಸುರಕ್ಷಾ ಠೇವಣಿ |
|---|---|---|---|
| 1 | ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಒಣಗಿ ನಿಂತ ಗಿಡಗಳು-43 | 60,000=00 | 1000=00 |
| 2 | ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಒಣಗಿ ಬಿದ್ದ ಗಿಡಗಳು-22 | 40,000=00 | 1000=00 |
| 3 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿ ಒಣಗಿ ನಿಂತ ಗಿಡಗಳು-44 | 30,000=00 | 1000=00 |
| 4 | ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿ ಒಣಗಿ ಬಿದ್ದ ಗಿಡಗಳು-19 | 45,000=00 | 1000=00 |

**ಟೆಂಡರ ಕರಾರುಗಳು :**

1. ಮೇಲೆ ತಿಳಿಸಿದ ಆವರಣದ ವಿವಿದ ಸ್ಥಳಗಳಲ್ಲಿ ಒಣಗಿ ನಿಂತ ಮತ್ತು ಬಿದ್ದ ಗಿಡಗಳನ್ನು ಚನ್ನಾಗಿ ಗುರುತಿಸಿಕೊಂಡು **"ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ"(Finance Officer, Karnatak University, Dharwad)** ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಪಸಲು ಠೇವಣಿ ಹಣದ ಡಿ.ಡಿ. ಯೊಂದಿಗೆ ತಮ್ಮ ಟೆಂಡರ ದರವನ್ನು ನಿಗದಿತ **ಫಾರ್ಮ** ನಲ್ಲಿ ಬರೆದು ಹಾಕಬೇಕು. ಫಾರ್ಮಗಳನ್ನು ರೂ. **3000=00** + CGST and SGST **540=00 (18 %)** = ಒಟ್ಟು ರೂ. **3540=00**. ರೂ. **3000=00** ಗಳನ್ನು ಚಲನ ಮೂಲಕ ಬ್ಯಾಂಕಿಗೆ ತುಂಬಿ ಉದ್ಯಾನ ವಿಭಾಗದಲ್ಲಿ ತೋರಿಸಿದಾಗ ಟೆಂಡರ ಫಾರ್ಮ ಕೊಡಲಾಗುವದು. CGST and SGST **(540=00)** ಹಣವನ್ನು ನಗದು ರೂಪದಲ್ಲಿ ನೀಡಬೇಕು. ಸದರ ಪ್ರಕ್ರಿಯಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಫಾರ್ಮ ಪಡೆಯಲೇ ಬೇಕು ಮತ್ತು ಟೆಂಡರ ಬಾಕ್ಸನಲ್ಲಿ ಹಾಕಬೇಕು. ಟೆಂಡರ ಫಾರ್ಮ ತುಂಬಿ ಟೆಂಡರ ಡಬ್ಬದಲ್ಲಿ ಹಾಕದೇ ನೇರವಾಗಿ ಬಹಿರಂಗ ಹರಾಜನಲ್ಲಿ ಭಾಗವಹಿಸಬಹುದಾಗಿದೆ. ಫಾರ್ಮಿಗೆ ಸಂಬಂದಿಸಿದಂತೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕಾಗಿ ಮರುಳಿಸಲಾಗುವದಿಲ್ಲಾ. **ಗಿಡಗಳ ಸಂಪೂರ್ಣ ಮಾಹಿತಿಯನ್ನು ಫಾರ್ಮ ಜೊತೆಯಲ್ಲಿ ನೀಡಲಾಗುವದು. ಗಿಡಗಳ ಸಂಖ್ಯೆ ಪ್ರಕೃತಿ ವಿಕೋಪದಿಂದ ಕಡಿಮೆ ಆಗಬಹುದು. ಗಿಡಗಳ ಮಾಹಿತಿಗಾಗಿ ಉದ್ಯಾನ ವಿಭಾಗದ ಸೂಚನಾ ಫಲಕದಲ್ಲಿ ನೋಡಬಹುದು.**
2. ದಿನಾಂಕ **3-11-22** ರಂದು ಮದ್ಯಾನ **3.00** ಗಂಟೆ ಒಳಗಾಗಿ ಉದ್ಯಾನ ಇಲಾಖೆಯಲ್ಲಿರುವ ಸೀಲು ಮಾಡಿದ ಟೆಂಡರ ಪೆಟ್ಟಿಗೆಯಲ್ಲಿ ಹಾಕಬೇಕು ತದ ನಂತರ ಬಂದವರನ್ನು ಪರಿಗಣಿಸಲಾಗುವದಿಲ್ಲಾ. ಮತ್ತು ಅದೇ ದಿವಸ ಮದ್ಯಾಹ್ನ **3.30** ಗಂಟೆಗೆ ಬಹಿರಂಗು ಹರಾಜು ಏರ್ಪಡಿಸಲಾಗುವದು. ಮೋಹರಾದ ಟೆಂಡರಗಳನ್ನು ಹರಾಜಿನ ನಂತರ ತೆರೆದು ಹೆಚ್ಚಿನ ಬೇಡಿಕೆದಾರರಿಗೆ, ಪಸಲು ಹರಾಜು ಸಮಿತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಗಿಡಗಳನ್ನು ನೀಡಲಾಗುವದು.
3. ಟೆಂಡರ: ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಪಸಲು ಪಡೆದವರು, ಪಸಲು ಹರಾಜು ಸಮಿತಿ ಸದಸ್ಯರು ಒಪ್ಪಿಗೆ ನೀಡಿದಲ್ಲಿ ಪಸಲು ಮೊತ್ತದಲ್ಲಿ ಠೇವಣೆ ಹಣ ವಜಾಗೊಳಿಸಿ ಉಳಿದ ಹಣದ **75% ಹಣವನ್ನು** ಮರು ದಿನ ಬ್ಯಾಂಕಿನ ಅವದಿಪೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅದೇ ವೇಳೆಗೆ ತಾವು ಕೊಂಡ ಪಸಲುಗಳನ್ನು ಎರಡನೇಯ ಬೇಡಿಕೆದಾರರಿಗೆ ನೀಡಬಹುದಾಗಿದೆ. ಅದಕ್ಕೆ ತಮ್ಮ ಯಾವುದೇ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.
4. ಟೆಂಡರ:ಬಹಿರಂಗ ಹರಾಜು ದರಗಳು ಮೇಲಾಧಿಕಾರಿಗಳಿಂದ ಅಂಗಿಕೃತವಾಗಿ ಬಂದ ನಂತರ ಇನ್ನೂಳಿದ ಹಣವನ್ನು ತುಂಬಲು ಸೂಚಿಸಿದಾಗ ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಹಾಗು ಶೇಖಡಾ **75% ರಷ್ಟು** ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಮೇಲ್ಕಂಡ ಗಿಡಗಳಿಗೆ ಯೋಗ್ಯ ಧಾರಣಿಯು ಬಾರದಿದ್ದಲ್ಲಿ ಟೆಂಡರ: ಬಹಿರಂಗ ಹರಾಜು ದರ ಸ್ವಿಕರಿಸುವ ಅಥವಾ ನೀರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.
5. ಗಿಡಗಳನ್ನು ತೆಗೆದುಕೊಂಡವರು ಕಡ್ಡಾಯವಾಗಿ ಸುರಕ್ಷಾ ಠೇವಣಿ ಕಟ್ಟತಕ್ಕದ್ದು ಸುರಕ್ಷಾ ಠೇವಣಿ ಹಣವನ್ನು ಗಿಡಗಳನ್ನು ತೆಗೆದುಕೊಂಡು ಹೋದನಂತರ ತಮಗೆ ಹಿಂತಿರುಗಿಸಲಾಗುವದು.
6. ಸದರ ಟೆಂಡರನಲ್ಲಿ ಭಾಗವಹಿಸಿ ಟೆಂಡರನಲ್ಲಿ ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಪಸಲಿನ ಹಣವನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ತುಂಬಿ ಪಸಲು ತೆಗೆದುಕೊಂಡು ಹೋಗುವ ಅನುಮತಿ ಪಡೆದ ನಂತರವು ಏನಾದರು ತೊಂದರೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸಲಾಗುವದಿಲ್ಲಾ.
7. ನಿಯಮಾನುಸಾರ ಸರಕಾರಕ್ಕೆ ತುಂಬಬೇಕಾದ ಮತ್ತು ಅರಣ್ಯ ಇಲಾಖೆಗೆ ಎಲ್ಲಾ ತೆರಿಗೆಗಳನ್ನು ತಾವೇ ತುಂಬಿ ಅರಣ್ಯ ಇಲಾಖೆ ಪಾಸ ಪಡೆದು ಜರಾಕ್ಸ ಪ್ರತಿಗಳನ್ನು ಉದ್ಯಾನ ಇಲಾಖೆಗೆ ಸಲ್ಲಿಸಿ ಕಟ್ಟಿಗೆ ತೆಗೆದುಕೊಂಡು ಹೋಗಬೇಕು.
8. ಗಿಡಗಳನ್ನು ಕಟಾವು ಮಾಡಿಕೊಂಡು ತೆಗೆದುಕೊಂಡು ಹೋಗುವಾಗ ಏನಾದರು ಅನಾಹುತ ಸಂಭವಿಸಿದಲ್ಲಿ ಕ.ವಿ.ವಿ. ಜವಾಬ್ದಾರವಲ್ಲಾ. ಪಸಲು ತೆಗೆದುಕೊಂಡು ಹೋಗುವಾಗ ಏನಾದರು ವಿಶ್ವವಿದ್ಯಾಲಯಕ್ಕೆ ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು, ಪಸಲು ತೆಗೆದುಕೊಂಡವರು ತಾವೇ ಪಸಲನ್ನು ಕಾಯಬೇಕು, ಟೆಂಡರ ನಡೆಯುವ ಸಮಯದಲ್ಲಿ ಶಾಂತತೆ ಕಾಪಾಡುವದು ತುಂಬಾ ಅವಶ್ಯ, ಟೆಂಡರ ಪ್ರಕ್ರಿಯಲ್ಲಿ ಶಾಂತತೆ ಕಾಪಾಡದಿದ್ದರ ಮತ್ತು ಏನಾದರ ತೊಂದರೆ ಯಾದಲ್ಲಿ ಟೆಂಡರನ್ನು ರದ್ದುಗೊಳಿಸಲಾಗುವದು ಇದಕ್ಕೆ ತಮ್ಮ ತಕಾರರಗಳನ್ನು ಪರಿಗಣಿಸಲಾಗುದಿಲ್ಲಾ. ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆಯಲ್ಲಿ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು.(ಮೊ.ನಂ. 8762270302)

21/x/22

ಕುಲಸಚಿವರು